ದಿನಾಂಕ:

ಇಂದ,

ಶ್ರೀ ಬಿ.ಎ.ನಂಜುಂಡಸ್ವಾಮಿ,
ನಂ.605, 26ನೇ ಅಡ್ಡರಸ್ತೆ,
20ನೇ ಮುಖ್ಯರಸ್ತೆ, ಪೂರ್ಣಪ್ರಜ್ಞಾ ಬಡಾವಣೆ,
ಉತ್ತರಹಳ್ಳಿ- ಕೆಂಗೇರಿ ರಸ್ತೆ,
ಬೆಂಗಳೂರು-61

ರವರಿಗೆ,

ಮಾನ್ಯ ಆಯುಕ್ತರು,
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ,
ಬೆಂಗಳೂರು.

ಮಾನ್ಯರೇ,

ವಿಷಯ:- ಪಾಲಿಕೆಯ ವ್ಯಾಪ್ತಿಯಲ್ಲಿ 2013, 2014 ಮತ್ತು 2015 ನೇ ಸಾಲಿನಲ್ಲಿ ವಿವಿಧ ಸಿವಿಲ್ ಹಾಗೂ ವಿದ್ಯುತ್ ಕಾಮಗಾರಿಗಳನ್ನು ಕೈಗೆತ್ತಿಕೊಂಡು ಪೂರ್ಣಗೊಳಿಸಿರುವ ಕಾಮಗಾರಿಗಳ ಪರಿಶೀಲನೆ ಮತ್ತು ವರದಿ-ಕುರಿತು.

ಉಲ್ಲೇಖ:- ತಮ್ಮ ಕಛೇರಿ ಪತ್ರ ಸಂಖ್ಯೆ: ಆ/ಪಿ.ಆರ್/ಜಿ664/15-16 ದಿನಾಂಕ: 02-05-2015.

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಪತ್ರದಲ್ಲಿ ತಿಳಿಸಿರುವಂತೆ ಕಾರ್ಯಪಾಲಕ ಅಭಿಯಂತರರು, ಬೃಹತ್ ನೀರುಗಾಲುವೆ, ಯಲಹಂಕ ವಲಯ ವ್ಯಾಪ್ತಿಯಲ್ಲಿ ನಿರ್ವಹಿಸಿರುವ ಕಾಮಗಾರಿಗಳನ್ನು ಪಾಲಿಕೆಯ ಅಧಿಕಾರಿಗಳ ಸಮಕ್ಷಮದಲ್ಲಿ ಪರಿವೀಕ್ಷಣೆ/ ತಪಾಸಣೆ ನಡೆಸಲಾಗಿದೆ. ತಪಾಸಣೆಯ ಸಮಯದಲ್ಲಿ ಈ ಕೆಳಕಂಡ ಅಂಶಗಳನ್ನು ಪರಿಶೀಲಿಸಲಾಗಿದೆ.

ಅ. ಪ್ರತಿ ಕಾಮಗಾರಿಗೆ ಸಂಬಂಧಿಸಿದಂತೆ ಕಡತಗಳನ್ನು ಪರಿಶೀಲಿಸಿ ಕಾಮಗಾರಿಯ ಆಡಳಿತಾತ್ಮಕ ಅನುಮೋದನೆ, ತಾಂತ್ರಿಕ ಅನುಮೋದನೆ ಮತ್ತು ಕಾಮಗಾರಿಯ ಕಾರ್ಯಾದೇಶದ ಪ್ರತಿಗಳನ್ನು ಪಡೆದು ವರದಿಯೊಂದಿಗೆ ಲಗತ್ತಿಸಿ ಸಲ್ಲಿಸಲಾಗಿದೆ.

ಆ. ಪರಿಶೀಲಿಸಲಾದ ಇತರೆ ಅಂಶಗಳು,

1. ದಾಖಲಿಸಲಾದ ಅಳತೆಗಳು ಉದ್ದ, ಅಗಲ, ದಪ್ಪ/ಎತ್ತರ
2. ಅಗತ್ಯತೆಗೆ ಅನುಗುಣವಾಗಿ ಗುಣಮಟ್ಟ ಪರೀಕ್ಷೆಯೊಂದಿಗೆ ಗುಣಮಟ್ಟವನ್ನು ದೃಢೀಕರಿಸಿಕೊಳ್ಳಲಾಗಿದೆ.

ಈಗ ಬಿಲ್ಲು ಪಾವತಿಸಲು ಸಲ್ಲಿಸಲಾಗಿರುವ ಕಾಮಗಾರಿಗಳಿಗೆ ಈ .ಹಿಂದೆ ಹಣ ಪಾವತಿಯಾಗಿದ್ದರೆ ಅಂತಹ ಪ್ರಕರಣಗಳನ್ನು ಇಲಾಖೆಯ ಲೆಕ್ಕವಿಭಾಗವು ಪರಿಶೀಲಿಸಿಕೊಂಡು ಕ್ರಮವಹಿಸಬೇಕಾಗಿರುತ್ತದೆ. ಸದರಿ ಪರಿಶೀಲನೆ ಹೊರತುಪಡಿಸಿ ಇತರೆ ನಿರ್ದೇಶಿತ ಅಂಶಗಳ ಪರೀಕ್ಷೆ ನನ್ನ ವ್ಯಾಪ್ತಿಯಲ್ಲಿ ಕೈಗೊಳ್ಳಲಾಗಿದೆ.

ಸಲ್ಲಿಸಲಾಗುತ್ತಿರುವ ಪ್ರತಿ ಕಾಮಗಾರಿಯ ತಪಾಸಣಾ ವರದಿಯನ್ನು ಸಂಬಂಧಪಟ್ಟ ಮುಖ್ಯ ಅಭಿಯಂತರರು ಮತ್ತು ಕಾರ್ಯಪಾಲಕ ಅಭಿಯಂತರರು ರವರು ಮೇಲು ಸಹಿ ಮಾಡಿದ್ದು, ಕಾಮಗಾರಿಗಳ ತಪಾಸಣಾ ವರದಿಯನ್ನು ದ್ವಿಪ್ರತಿಯಲ್ಲಿ ಮುಂದಿನ ಅಗತ್ಯ ಕ್ರಮಕ್ಕಾಗಿ ಸಲ್ಲಿಸಲಾಗಿದೆ.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ,

(ಬಿ.ಎನ್.ನಂಜುಂಡಸ್ವಾಮಿ)

ತಪಾಸಣಾ ವರದಿ

ಬಿ.ಆರ್.ಸಂಖ್ಯೆ/ದಿನಾಂಕ	ಕಾಮಗಾರಿಯ ಹೆಸರು	ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ)
	Remodeling of SWD BP 026 (BY03) from BB Nagara, Kodigehalli to H-200 primary drain near Nagashettihalli main road in ward no.08, in Yelahanka Zone	160.00

ಬಿ.ಎ. ನಂಜುಂಡಸ್ವಾಮಿ ಆದ ನಾನು ಖುದ್ದಾಗಿ ಮೇಲ್ಕಂಡ ಕಾಮಗಾರಿಯನ್ನು ಲಗತ್ತಿಸಿರುವ ಚೆಕ್ ಲಿಸ್ಟ್‌ನಲ್ಲಿ ವಿವರಿಸಿರುವ ದಾಖಲೆಗಳಂತೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಹಾಯಕ ಅಭಿಯಂತರರು, ಸಹಾಯಕ ಕಾರ್ಯಪಾಲಕ ಅಭಿಯಂತರರು ಮತ್ತು ಕಾರ್ಯಪಾಲಕ ಅಭಿಯಂತರರು ರವರೊಂದಿಗೆ ತಪಾಸಣೆ ಮಾಡಿರುತ್ತೇನೆ.

ಸದರಿ ಕಾಮಗಾರಿ ಬಿಲ್ಲು ಪಾವತಿಯನ್ನು ತಡೆಯಿಡಿಯುವ/ ತಿರಸ್ಕರಿಸುವಂತಹ ಅಂದರೆ ಬಿಲ್ಲು ಪಾವತಿ ನಿರಾಕರಿಸುವಂತಹ ಯಾವುದೇ ನಕಾರಾತ್ಮಕ ಕಾರಣಗಳು ಕಂಡು ಬಂದಿಲ್ಲವಾದ್ದರಿಂದಲೂ ಹಾಗೂ ಈ ಕೆಳಗೆ ನಮೂದಿಸಿರುವ ಅಂಶಗಳು ಕ್ರಮ ಬದ್ಧವಾಗಿರುವುದರಿಂದಲೂ

(ಉದ್ದ x ಅಗಲ x ಎತ್ತರ) ಉದ್ದ x ಅಗಲದೊಂದಿಗೆ ನಿರ್ದೇಶಿತ ದಪ್ಪ ಅಳತೆ ಪುಸ್ತಕದಲ್ಲಿ ದಾಖಲಿಸಿರುವಂತೆ ಸರಿಯಾಗಿದ್ದು, ಗುಣಮಟ್ಟವು ತೃಪ್ತಿಕರವಾಗಿರುವುದು ಕಂಡುಬಂದಿರುತ್ತದೆ.

ಮೇಲೆ ವಿವರಿಸಿರುವ ಕಾರಣಗಳು ಹಾಗೂ ತಪಾಸಣೆಯಲ್ಲಿ ಸದರಿ ಕಾಮಗಾರಿಯ ತೃಪ್ತಿಕರವಾಗಿ ನಿರ್ವಹಿಸಲ್ಪಟ್ಟಿದೆಯೆಂದು ದೃಢೀಕರಿಸಿ ಮುಖ್ಯ ಅಭಿಯಂತರರು ಮತ್ತು ಕಾರ್ಯಪಾಲಕ ಅಭಿಯಂತರರು ರವರ ಮೇಲು ಸಹಿಯೊಂದಿಗೆ ಮಾನ್ಯ ಆಯುಕ್ತರು ರವರಿಗೆ ಸಲ್ಲಿಸಲಾಗಿದೆ.

[ಬಿ.ಎ.ನಂಜುಂಡಸ್ವಾಮಿ]

ಮೇಲು ಸಹಿ

ಕಾರ್ಯಪಾಲಕ ಅಭಿಯಂತರರು
ಬೃಹತ್ ನೀರುಗಾಲುವೆ, ಯಲಹಂಕ ವಲಯ

ಮುಖ್ಯ ಅಭಿಯಂತರರು
ಬೃಹತ್ ನೀರುಗಾಲುವೆ